(ಆ) ಧಾರವಾಡ, ಗದಗ ಮತ್ತು ಹಾವೇರಿ ಈ ಮೂರು ಜಿಲ್ಲೆಗಳಿಂದ ಉಸುಕಿನಿಂದ ಸರ್ಕಾರಕ್ಕೆ ಬರುವ ಆದಾಯವೆಷ್ಟು?

(ಇ) ಸರ್ಕಾರಕ್ಕೆ ಉಸುಕಿನಿಂದ ಬರುವ ಆದಾಯ ನಾಲ್ಕು ಪಟ್ಟು ಸೋರಿ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಈ) ಬಂದಿದ್ದಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

(ಉ) ಉಸುಕಿನ ಗುತ್ತಿಗೆ ಕೊಡುವ ಸರ್ಕಾರದ ರೀತಿನೀತಿಗಳೇನು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು) :

(ಅ) ರೂ. 163-07 ಲಕ್ಷ.

(ಆ)

1.	ಧಾರವಾಡ	-	ಇಲ್ಲ
2.	ಗದಗ	-	2.47 ಲಕ್ಷ
3.	ಹಾವೇರಿ	-	24-42 ಲಕ್ಷ
		ಒಟ್ಟು	26-89 ಲಕ್ಷ

(ಇ) ಬಂದಿದೆ.

(ಈ) ಮರಳು ಇರುವ ಪ್ರಮುಖ ಪ್ರದೇಶದಲ್ಲಿ ತನಿಖಾ ಠಾಣೆಗಳನ್ನು ಸ್ಥಾಪಿಸಿ ಹಾಗೂ ಮರಳು ಜಾಗಕ್ಕೆ ಭೇಟಿ ನೀಡಿ ಕಳ್ಳ ಸಾಗಾಣಿಕೆ ಆಗುವುದನ್ನು ತಡೆಹಿಡಿದು ಸರ್ಕಾರದ ಆದಾಯದಲ್ಲಿನ ಸೋರುವಿಕೆಯನ್ನು ಕಡಿಮೆ ಮಾಡಲಾಗಿದೆ.

(ಉ) ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ 1994ರಲ್ಲಿರುವ ಅವಕಾಶಗಳನ್ನೇ ಪಾಲಿಸಲಾಗುತ್ತಿದೆ.

ಗದಗ ತಾಲ್ಲೂಕು ಕಪ್ಪದಗುಡ್ಡದಲ್ಲಿ ಬಂಗಾರ ಉತ್ಪಾದನೆಯ ಘಟಕ ಮುಚ್ಚಿರುವ ಬಗ್ಗೆ.

2061 (2629) : ಶ್ರೀ ಪಾಟೀಲ್ ಸಿದ್ಧಲಿಂಗನಗೌಡ ಸಿದ್ಧನಗೌಡ (ಮುಂಡರಗಿ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಗದಗ ಜಿಲ್ಲೆ, ಗದಗ ತಾಲ್ಲೂಕಿನ ಕಪ್ಪತಗುಡ್ಡದಲ್ಲಿ ಬಂಗಾರ ಉತ್ಪಾದನೆಯ ಘಟಕ ಮುಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಬಂದಿದ್ದಲ್ಲಿ, ಈ ಘಟಕ ಮುಚ್ಚಲು ಕಾರಣಗಳೇನು?

(ಇ) ಆ ಘಟಕವನ್ನು ಪುನಃ ಪ್ರಾರಂಭ ಮಾಡಲಾಗುವುದೇ?

(ಈ) ಆ ಘಟಕ ಮುಚ್ಚಿರುವುದರಿಂದ ಪ್ರತಿ ವರ್ಷ ಸರ್ಕಾರಕ್ಕೆ ಹಾನಿ ಇದೆಯೇ? ಇದ್ದಲ್ಲಿ ಎಷ್ಟು ಹಾನಿಯಾಗುತ್ತದೆ? ತಿಳಿಸುವುದು.

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :

(ಅ) ಹೌದು.

(ಆ) ದೊರೆಯುತ್ತಿದ್ದ ಅದಿರು ಆರ್ಥಿಕವಾಗಿ ಕಾರ್ಯಸಾಧುವಾಗಿರಲಿಲ್ಲ.

(ಇ) ಇಲ್ಲ.

(ಈ) ಇಲ್ಲ.

ರಾಜ್ಯದ ಪುರಸಭೆ ಪಟ್ಟಣ ಪಂಚಾಯತ್‌ಗಳಿಗೆ ಮಂಜೂರಾದ ಐ.ಡಿ.ಎಸ್.ಎಂ.ಟಿ. ಯೋಜನೆಗಳು

2062 (2630) : ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ (ಮುಂಡರಗಿ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದ ಪುರಸಭೆ ಪಟ್ಟಣ ಪಂಚಾಯಿತಿಗಳಿಗೆ 1998-99 ಮತ್ತು 1999-2000ನೇ ಸಾಲಿನಲ್ಲಿ ಮಂಜೂರಾದ ಐ.ಡಿ.ಎಸ್.ಎಂ.ಟಿ. ಯೋಜನೆಗಳೆಷ್ಟು? (ವಿವರ ನೀಡುವುದು).

(ಆ) ಮುಂಡರಗಿ ಮತಕ್ಷೇತ್ರದ ಮುಳಗುಂದ ಹಾಗೂ ಮುಂಡರಗಿ ಪಟ್ಟಣ ಪಂಚಾಯಿತಿಗೆ ಐ.ಡಿ.ಎಸ್.ಎಂ.ಡಿ. ಯೋಜನೆ ಕಾರ್ಯಗತಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :

(ಅ) ಕೇಂದ್ರ ಪುರಸ್ಕೃತ ಐ.ಡಿ.ಎಸ್.ಎಂ.ಟಿ ಯೋಜನೆಯನ್ನು ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ವಿಸ್ತರಿಸಲು ರಾಜ್ಯ ಮಟ್ಟದ ಮಂಜೂರಾತಿ ಸಮಿತಿ ಈ ಕೆಳಕಂಡಂತೆ ಆಯ್ಕೆ ಮಾಡಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ.

1998-99ನೇ ಸಾಲಿನಲ್ಲಿ	10 ಪಟ್ಟಣಗಳಿಗೆ
1999-2000ನೇ ಸಾಲಿನಲ್ಲಿ	12 ಪಟ್ಟಣಗಳಿಗೆ

ಭಾರತ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ.

(ಆಯ್ಕೆಯಾದ ಪಟ್ಟಣಗಳ ವಿವರಗಳನ್ನು ಅನುಬಂಧದಲ್ಲಿ ನೋಡಬಹುದು).

(ಆ) ಮುಳಗುಂದ ಮತ್ತು ಮುಂಡರಗಿ ಪಟ್ಟಣಗಳಲ್ಲಿ ಐ.ಡಿ.ಎಸ್.ಎಂ.ಟಿ. ಯೋಜನೆಯನ್ನು ಕಾರ್ಯಗತಗೊಳಿಸಲು 1999-2000ನೇ ಸಾಲಿನಲ್ಲಿ ಈ ಪಟ್ಟಣಗಳನ್ನು ರಾಜ್ಯ ಮಟ್ಟದ